೧೪) ಸಂಡೂರು ಜನರಲ್ ಆಸ್ಪತ್ರೆಗೆ ಎಕ್ಸರೇ ತಂತ್ರಜ್ಞರನ್ನು ನೇಮಿಸುವುದು ಮತ್ತು ಕ್ಷಕಿರಣ ಯಂತ್ರವನ್ನು ರಿಪೇರಿ ಮಾಡಿಸುವುದರ ಬಗ್ಗೆ

ಶ್ರೀ ಯು. ಭೂಪತಿ (ಸಂಡೂರು).— ಸಂಡೂರಿನ ಜನರಲ್ ಆಸ್ಪತ್ರೆಯಲ್ಲಿ ಒಂದು ಕ್ಷಕಿರಣ ಯಂತ್ರವಿದ್ದು ಇಲ್ಲಿಯವರೆಗೆ ಅದನ್ನು ಉಪಯೋಗಿಸಿಲ್ಲವೆಂದು ತಿಳಿದುಬಂದಿದೆ. ಸಂಡೂರಿನ ಜನರು ಎಕ್ಸರೇ ಫೋಟೋಗ್ರಾಫ್ ಮಾಡಿಸಬೇಕಾದಲ್ಲಿ ಕನಿಷ್ಟ ೩೦ ಕಿ. ಮೀ. ದೂರ ಹೋಗಿ ಬರಬೇಕಾಗಿದೆ. ಅಲ್ಲದೇ ಎಕ್ಸರೇ ತಂತ್ರಜ್ಞರೊಬ್ಬರನ್ನು ನೇಮಕಮಾಡಲು ಜೂನ್ ತಿಂಗಳಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೆ. ನನ್ನ ಮನವಿ ಇನ್ನೂ ಕೂಡ ಕಾರ್ಯಗತಗೊಂಡಿಲ್ಲ ಸಾರ್ವಜನಿಕ ಹಿತದೃಷ್ಟಿಯಿಂದ ಒಬ್ಬ ಎಕ್ಸರೇ ತಂತ್ರಜ್ಞರನ್ನು ತಕ್ಷಣ ಸಂಡೂರಿಗೆ ನೇಮಿಸಲು ಹಾಗೂ ಯಂತ್ರವನ್ನು ದುರಸ್ತಿ ಮಾಡಿಸಲು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.— ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಂಬಂಧಿಸಿದ ಇಂಜಿನಿಯರುಗಳು ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ರಿಪೇರಿ ಮಾಡಿಸಬೇಕು, ಅದನ್ನು ಮಾಡಿಸುತ್ತೇನೆ ಹೊಸದಾಗಿ ಬಂದಿದೆ, ಕ್ಷ-ಕಿರಣ ತಂತ್ರಜ್ಞರನ್ನು ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

೧೫) ಹುಣಸಾಳ ಕ್ಷೇತ್ರದಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸುವುದರ ಬಗ್ಗೆ

ಶ್ರೀ ಆರ್. ಎಂ. ಪಾಟೀಲ (ಅರಭಾವಿ).— ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಹುಣಸ್ಯಾಳ ದಲ್ಲಿ ೧೯೭೫ ರಲ್ಲಿ ಡಿ. ಪಿ. ಎ. ಪಿ. ಯೋಜನೆಯಡಿಯಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ, ಖ್ಯಾರೇಜೊಂದನ್ನು ನಿರ್ಮಾಣ ಮಾಡುವ ಕಾರ್ಯ ಆರಂಭವಾಯಿತು. ಈ ಯೋಜನೆ ಪೂರ್ತಿಗೊಂಡಾಗ, ಸುಮಾರು ೬೨೦ ಎಕರೆಗೆ ೧೨ ತಿಂಗಳ ಕಾಲವೂ ನೀರು ಸಿಗುತ್ತದೆ. ಆರಂಭದಲ್ಲಿ ಕೆಲಸ ತೀವ್ರಗತಿಯಲ್ಲಿ ಆರಂಭವಾಗಿ ಇದು ಈಗ ಸ್ಥಗಿತಗೊಂಡಿದೆ. ಅರ್ಧಕ್ಕೆ ನಿಂತಿರುವ ಈ ಕೆಲಸ ಪೂರ್ತಿಯಾದಲ್ಲಿ ಬರಗಾಲಕ್ಕೆ ಮೇಲಿಂದ ತುತ್ತಾಗುವ ಈ ಭಾಗದ ಜನರಿಗೆ ಶಾಶ್ವತ ಅನುಕೂಲವಾಗುವುದಲ್ಲದೆ, ಮಹಾಲಿಂಗಪುರ, ಕುಲಗೋಡ, ಗ್ರಾಮಗಳಿಗೆ ಸಂಪರ್ಕವೂ ಒದಗುವುದು. ಇನ್ನು ಕೇವಲ ೬ ಲಕ್ಷದಷ್ಟು ಹಣ ಖರ್ಚು ಮಾಡಿದರೆ ಈ ಬ್ಯಾರೇಜ್ ಕೆಲಸ ಪೂರ್ತಿಗೊಳ್ಳುವುದು. ಕಾರಣ ಬಾಕಿ ಉಳಿದಿರುವ ಕೆಲಸಕ್ಕಾಗಿ ಹಣ ಮಂಜೂರಾಗಿದೆ ಯೋಜನೆಯನ್ನು ಪೂರ್ತಿಗೊಳಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ.— ಸನ್ಮಾನ್ಯ ಅಧ್ಯಕ್ಷರೇ, ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದರೆ ಉತ್ತರ ತರಿಸಿಕೊಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈಗ ಇದ್ದಾರು ಅದರೂ ಈ ಪ್ರಶ್ನೆ ಬಗ್ಗೆ ಉತ್ತರ ಬೇರೆ ಮಂತ್ರಿಗಳು ಹೇಳುತ್ತಾರೆ. ಅವರು ಉತ್ತರ ಕಳುಹಿಸಿದ್ದರೆ, ಅದನ್ನು ಬೇರೆ ಯಾವುದೇ ಸಚಿವರಾದರೂ ಓದಬಹುದು...

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ, ಸಾಕಷ್ಟು ಉತ್ತರ ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ. ಇವತ್ತು ೩೫ ಪ್ರಶ್ನೆಗಳು ಈ ನಿಯಮದಲ್ಲಿವೆ. ನಾವು ಬ್ಯಾಲೆಟ್ ಮಾಡಿದ್ದರೆ ೫-೬ಕ್ಕೆ ಮಾತ್ರ ಅವಕಾಶ ಸಿಗುತ್ತಿತ್ತು ಆದರೆ ಸದಸ್ಯರಿಗೆಲ್ಲರಿಗೂ ಅವಕಾಶ ಮಾಡಿಕೊಡಬೇಕೆಂದು ನಾನು ಈ ರೀತಿ ಮಾಡಿದ್ದೇನೆ ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಮಂತ್ರಿಗಳು ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ. ಸದನದ ಗಮನಕ್ಕೆ ಬಂದಮೇಲೆ ಕೊನೆಯಪಕ್ಷ ಲಿಖಿತ ಉತ್ತರವನ್ನಾದರೂ ಕೊಡಬೇಕು...

ಅಧ್ಯಕ್ಷರು. — ಇವತ್ತೇ ಕೊಡಬೇಕೆಂದು ರೂಲ್ಸ್‌ನಲ್ಲಿ ಇಲ್ಲ, ನಾಳೆ ಕೊಡಬಹುದು, ಉತ್ತರ ತರಿಸಿಕೊಡಬಹುದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಾಗಾದರೆ, ನಾವು ಪೋಸ್ಟ್‌ನಲ್ಲಿ ಬರೆದು ಕಳುಹಿಸುತ್ತೇವೆ, ಅವರೂ ಕೂಡ ಪೋಸ್ಟ್‌ನಲ್ಲಿ ಉತ್ತರ ಕಳುಹಿಸಿಕೊಡಲಿ...

ಅಧ್ಯಕ್ಷರು.— ನೀವು ಬಯಾವಿಟ್ಟು ಕೂಡಿ. ಶ್ರೀಮತಿ ನಾಗರತ್ನಮ್ಮನವರೇ ತಾವು ಕೇಳಿ.

೧೦) ಹುಣಸೂರು ತಾಲ್ಲೂಕಿನ ನಡಪನಹಳ್ಳಿಯ ಚೆನ್ನೇಗೌಡ ಎನ್ನುವವರು ಕೊಲೆಯಾಗಿರುವ ಬಗ್ಗೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ — ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಸಬಾಹೋಬಳಿಯಲ್ಲಿ ಬರುವ ನಾಡಪ್ಪನಹಳ್ಳಿ, ಗ್ರಾಮದ ಶ್ರೀಮತಿ ಚಿಕ್ಕತಾಯಮ್ಮ ಕೋಂ ಎಂ. ರಂಗೇಗೌಡ ಹಾಗೂ ಶ್ರೀಮತಿ ಬೋರಮ್ಮ ಕೋಂ ಸಣ್ಣತಿಮ್ಮೇಗೌಡರ ಮನವಿ ಯೊಂದನ್ನು ನೀಡಿ, ಸದರಿ ಗ್ರಾಮದ ಶ್ರೀ ಜವರೇಗೌಡರ ಮಗ ಚೆನ್ನೇಗೌಡ ಎಂಬುವರು ದಿನಾಂಕ ೩೧-೮-೮೭ರಂದು ಕೊಲೆಯಾಗಿರುವುದರ ಹಿನ್ನೆಲೆಯಲ್ಲಿ ಹುಣಸೂರು ಗ್ರಾಮಾಂತರ ಪೋಲೀಸರು ಶ್ರೀಯುತರುಗಳಾದ ಸಣ್ಣತಿಮ್ಮೇಗೌಡ, ಬಸವರಾಜೇಗೌಡ, ಪ್ರಕಾಶೇಗೌಡ, ಶಿವಣ್ಣೇಗೌಡ, ಮರಗೇಗೌಡ, ನಾಗಣ್ಣೇಗೌಡ, ನಾಗಣ್ಣೇಗೌಡ, ರಂಗಸ್ವಾಮಿಗೌಡ, ರಾಮಕೃಷ್ಣಗೌಡ ಮುಂತಾದವರನ್ನು ಪೋಲೀಸಿ ನವರು ಬಂಧಿಸಿರುವುದು ಹಾಗೂ ಕೊಲೆಯಾದವರ ಸಂಬಂಧಿಕರು ಊರಿನಲ್ಲಿ ಇವರುಗಳ ಮನೆಗಳಿಗೆ ನಂಗ್ಗಿ ದವಸಧಾನ್ಯಗಳನ್ನು ಲೂಟಿ ಮಾಡಿರುವುದು, ತೋಟಗಳಲ್ಲಿ ಹಾವಳಿ ಮಾಡಿರುವುದು ಹಾಗೂ ಇವರಿಗೆ ಪ್ರಾಣ ಭೀತಿಯನ್ನು ಒಡ್ಡುವುದರಿಂದ ಇವುಗಳಿಗೆ ರಕ್ಷಣೆ ಹಾಗೂ ಅವರ ಆಸ್ತಿಪಾಸ್ತಿಗಳ ರಕ್ಷಣೆಗೆ ಪೋಲೀಸರಿಂದ ದೊರಕಿಸಿಕೊಟ್ಟು, ಇವರುಗಳ ರಕ್ಷಣೆ ಬಯಸಿ ಊರನ್ನೇ ಬಿಟ್ಟಿರುವುದಂದ ಕೂಡಲೇ ಕ್ರಮ ಕೈಗೊಂಡು ಅವರುಗಳಿಗೆ ರಕ್ಷಣೆ ನೀಡಲು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ. ಅಧ್ಯಕ್ಷರೇ, ಕೊಲೆ ಮಾಡಿರುವವರ ಮೇಲೆ ಏನು ಬೇಕಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಅಡ್ಡಿ ಇಲ್ಲ...

ಅಧ್ಯಕ್ಷರು.— ಇದರಲ್ಲಿ ಏನೂ ಹೇಳುವುದಕ್ಕೆ ಬರುವುದಿಲ್ಲ, ದಯಮಾಡಿ ಕುಳಿತುಕೊಳ್ಳಿ, ತಾವು ೬ ವರ್ಷಗಳ ಕಾಲ, ಈ ಜಾಗದಲ್ಲಿ ಕುಳಿತುಕೊಂಡು ಕೆಲಸ ನಿರ್ವಹಿಸಿದ್ದೀರಿ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಹೆಚ್ಚಿಗೆ ಏನನ್ನೂ ಹೇಳುವುದಿಲ್ಲ. ಇವರಿಗೆ ರಕ್ಷಣೆ ಕೊಡಬೇಕೆಂದು ಮಾತ್ರ ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಗೃಹ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯ ವಿರೋಧ ಪಕ್ಷದ ನಾಯಕಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ನಿಯಮ ೩೫೯ರ ನೋಟೀಸ್‌ಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀಮತಿ ಚಿಕ್ಕತಾಯಮ್ಮ ಮತ್ತು ಶ್ರೀಮತಿ ಬೋರಮ್ಮನ ಕುಟುಂಬಗಳ ರಕ್ಷಣೆಯ ಬಗ್ಗೆ ಮಾನ್ಯ ಪ್ರತಿಪಕ್ಷದ ನಾಯಕಿಯವರು ಎತ್ತಿದ ವಿಷಯವು ಹುಣಸೂರು ಗ್ರಾಮಾಂತರ ಠಾಣೆಯ ಸರ ಹದ್ದಿನಲ್ಲಿರುವ ನಡಪನಹಳ್ಳಿ ಗ್ರಾಮದಿಂದ ವರದಿಯಾದ ಕೊಲೆ ಪ್ರಕರಣ ಗುನ್ನೆ ನಂ ೧೯೧.೮೭ ಕಲಂ ೧೪೩,೧೪೨,೧೪೮,೩೦೮ ೩೦೨ ಜೊತೆಗೆ ೧೪೦ ಭಾ.ದಂ.ಸಂ. ಪ್ರಕಾರ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಈ ಪ್ರಕರಣದ ವಿವರಗಳು ಈ ರೀತಿ ಇರುತ್ತವೆ.

ದಿನಾಂಕ ೩೧.೮.೮೭ ರಂದು ಸುಮಾರು ರಾತ್ರಿ ೧೦.೦೦ ಗಂಟೆಯ ಸಮಯಕ್ಕೆ ನಡಪನಹಳ್ಳಿ ಗ್ರಾಮದಲ್ಲಿರುವ ಸಾರ್ವಜನಿಕ ನೀರಿನ ಕಾಲುವೆಯಿಂದ ನೀರನ್ನು ದಾಯಿಸಿಕೊಳ್ಳಲು ಜವರೇಗೌಡರ ಇಬ್ಬರು ಮಕ್ಕಳು ಶಿವೇಗೌಡ (ವಯಸ್ಸು .೨೨ ವರ್ಷ) ಮತ್ತು ಚೆನ್ನೇಗೌಡ (ವಯಸ್ಸು. ೨೦ ವರ್ಷ) ಹೋದರು.

ಆ ವೇಳೆಯಲ್ಲಿ ಆರೋಪಿಗಳಾದ ೧) ರಂಗಸ್ವಾಮಿಗೌಡ, ೨) ಶಿವೇಗೌಡ, ೩)ತಮ್ಮೇಗೌಡ, ೪) ಮರೀಗೌಡ, ೫) ಬಸವೇಗೌಡ, ೬) ಪ್ರಕಾಶೇಗೌಡ, ೭) ಯೋಗಣ್ಣಗೌಡ, ಮತ್ತು ೮) ಸಣ್ಣತಿಮ್ಮೇಗೌಡ ಇವರು ಜವರೇಗೌಡರ ಮಕ್ಕಳು ಶಿವೇಗೌಡ ಮತ್ತು ಚೆನ್ನೇಗೌಡರನ್ನು ತಡೆದು ಗುದಲಿ ಮತ್ತು ಇತರ ಅಪಾಯಕರ ಆಯುಧಗಳಿಂದ ಹೊಡೆದರು. ಚೆನ್ನೇಗೌಡ ಸ್ಥಳದಲ್ಲೇ ಮೃತ

ಹೊಂದಿದರು. ತೀವ್ರ ಗಾಯಗಳಾಗಿದ್ದರಿಂದ ಶಿವೇಗೌಡರನ್ನು ವೈದ್ಯಕೀಯ ಇಲಾಜಿಗೆ ಕೆ. ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಈ ಪ್ರಕರಣದ ಮೃತರ ಆಳು ರಾಮಕೃಷ್ಣರವರ ಫಿರ್ಯಾದಿನಂತೆ ಮೇಲೆ ಹೇಳಿದಂತೆ ಹುಣಸೂರು ಗ್ರಾಮಾಂತರ ಠಾಣೆಯ ಗುನ್ನೆ ನಂ. ೧೯೧.೮೭ ದಾಖಲಾಗಿದ್ದು ತನಿಖೆಯಲ್ಲಿರುತ್ತದೆ.

ದಿನಾಂಕ ೧೮.೮೭ರವರೆಗೆ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ತಲೆ ಮರೆಸಿಕೊಂಡಿರುವ ಆರೋಪಿ ಸಣ್ಣತಿಮ್ಮೇಗೌಡ ಮನವಿದಾರರಾದ ಶ್ರೀಮತಿ ಬೋರಮ್ಮನ ಗಂಡ ನಾಗಿರುತ್ತಾರೆ. ಮತ್ತೊಬ್ಬ ತಲೆ ಮರೆಸಿಕೊಂಡಿರುವ ಆರೋಪಿ ಯೋಗಣ್ಣಗೌಡನು ಆಕೆಯ ಮಂಗ ನಾಗಿರುತ್ತಾನೆ. ಮೇಲೆ ಹೇಳಿದ ೮ ಜನ ಅಪರಾಧಿಗಳ ಪೈಕಿ ನಾಲ್ವರು ಇನ್ನೊಬ್ಬ ಮನವಿದಾರರಾದ ಚಿಕ್ಕ ತಾಯಮ್ಮನ ಮಕ್ಕಳಾಗಿರುತ್ತಾರೆ.

ಈ ಪ್ರಕರಣದಲ್ಲಿ ಮೃತನು ಮತ್ತು ಆರೋಪಿಗಳು ದೂರದ ಸಂಬಂಧಿಗಳಾಗಿರುತ್ತಾರೆ. ಅವರಿಗೆ ಹಿಂದಿನ ದ್ವೇಷವಿದ್ದು ಘಟನೆ ಆದ ರಾತ್ರಿ ನೀರನ್ನು ಸಾರ್ವಜನಿಕ ಕಾಲುವೆಯಿಂದ ತಿರುವಿಕೊಳ್ಳುವ ಬಗ್ಗೆ ಭಿನ್ನಾಭಿಪ್ರಾಯದಿಂದ ಈ ಕೃತ್ಯವು ನಡೆದಿರುತ್ತದೆ.

ನಡಪನಹಳ್ಳಿ ಗ್ರಾಮದ ಮನವಿದಾರರಾದ ಚಿಕ್ಕತಾಯಮ್ಮ ಮತ್ತು ಬೋರಮ್ಮ ಇವರುಗಳು ತಮ್ಮ ಆಸ್ತಿ ನಾಶದ ಹಾಗೂ ಪ್ರಾಣಕ್ಕೆ ಬೆದರಿಕೆಯ ಆರೋಪವನ್ನು ಮಾಡಿದ್ದರಿಂದ ಈಗ ಎಸ್. ಪಿ. ರವರ ಪ್ರಭಾರದಲ್ಲಿರುವ ಮೈಸೂರಿನ ಎಸ್. ಪಿ. ರವರು ದಿನಾಂಕ ೧೯.೯.೮೭ರಂದು ನಡಪನಹಳ್ಳಿಗೆ ಭೇಟಿ ಕೊಟ್ಟಿರುತ್ತಾರೆ. ಅವರು ತಮ್ಮ ಸರದಿಯಲ್ಲಿ ನಡಪನಹಳ್ಳಿಯಲ್ಲಿ ರಂಗೇಗೌಡ ಮತ್ತು ಆರೋಪಿಗಳ ಸಂಬಂಧಿಗಳನ್ನು ಮತ್ತು ಆಸುಪಾಸಿನವರನ್ನು ವಿಚಾರಿಸಿದ್ದಾಗಿಯೂ ಹಾಗೂ ಸಂಬಂಧಪಟ್ಟವರ ಜವಿನಂಗಳಿಗೆ ಭೇಟಿ ಕೊಟ್ಟಿದ್ದಾಗಿಯೂ ಆಗ ಯಾವ ಆಸ್ತಿ, ಬೆಳೆ ನಾಶವೂ ಆಥವಾ ದಾಂಧಲೆ ಯಾಗಿರುವುದು ಕಂಡು ಬರಲಿಲ್ಲವೆಂದು ತಿಳಿಸಿರುತ್ತಾರೆ.

ತನ್ನ ಪತಿ ಭಾಗಿಯಾದ ಈ ಕೊಲೆಯ ಪ್ರಕರಣವನ್ನು ನೋಡಿದ ಮನವಿದಾರಳಾದ ಶ್ರೀಮತಿ ಬೋರಮ್ಮ ಕೋಂ ಸಣ್ಣತಿಮ್ಮೇಗೌಡ ಊರನ್ನು ತನ್ನಷಕ್ಕೆ ತಾನೇ ದಿನಾಂಕ ೨೨.೮೭ಕ್ಕೆ ಬಿಟ್ಟಿರುತ್ತಾಳೆ. ಆರೋಪಿಗಳ ಕುಟುಂಬಕ್ಕೆ ರಕ್ಷಣೆ ದೊರೆತ್ತಿಲ್ಲವೆಂಬ ಆರೋಪವು ಸತ್ಯಕ್ಕೆ ದೂರವಾಗಿರುತ್ತದೆ.

ಆದಾಗ್ಯೂ ಮುಂಜಾಗ್ರತಾ ಕ್ರಮವಾಗಿ ಗ್ರಾಮದಲ್ಲಿ ಶಾಂತಿಯನ್ನು ಕಾಪಾಡಲು ಸ್ಥಳೀಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮುಕ್ಕಾಂ ಮಾಡಿರುತ್ತಾರೆ. ಅವರ ಜೊತೆಯಲ್ಲಿ ಒಬ್ಬ ಸಿವಿಲ್ ಮುಖ್ಯ ಪೇದೆ, ಇಬ್ಬರು ಸಿವಿಲ್ ಪೇದೆಗಳು ಮತ್ತು ಒಂದು ಸಶಸ್ತ್ರ ಪೋಲೀಸ್ ಪೇದೆಯನ್ನು ವ್ಯಾನಿನ ಸಹಿತ ಕಾವಲಿಗಾಗಿ ಇಡಲಾಗಿದೆ. ಈಗ ಊರಿನಲ್ಲಿ ಪರಿಸ್ಥಿತಿಯು ಶಾಂತವಾಗಿರುತ್ತದೆ,

ಅಧ್ಯಕ್ಷರೇ, ನಿನ್ನೆ ಬೆಳಿಗ್ಗೆ ಈ ವಿಷಯ ನನ್ನ ಗಮನಕ್ಕೆ ಬಂತು. ಹುಣಸೂರಿನ ಕೆಲವರು ಬಂದು ನನ್ನಲ್ಲಿ ಹೇಳಿದ್ದಾರೆ. ಶ್ರೀಮತಿ ಚಂದ್ರಪ್ರಭಾ ಅರಸ್‌ರವರೂ ಸಹ ನಮ್ಮ ಮನೆಗೆ ಬಂದು ಈ ವಿಚಾರ ಹೇಳಿದಾಗ, ನಾನು ಕೂಡಲೇ ಅವರ ಎದುರಿನಲ್ಲೇ ಡಿ. ಐ. ಜಿ.ಯವರಿಗೆ ಫೋನ್ ಮಾಡಿ, ಅವರೇ ಸ್ವತಃ ಆ ಊರಿಗೆ ಹೋಗಿ ಅಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬೇಕೆಂದು ಹೇಳಿದ್ದೇನೆ. ಆರೋಪಿ ಗಳನ್ನು ಅರೆಸ್ಟ್ ಮಾಡುವುದು ಕರ್ತವ್ಯ. ಆದರೆ ಅವರ ಮನೆಯವರನ್ನು ಹಿಂಸಿಸಬಾರದು. ಬೇರೆ ಯವರೂ ಹಿಂಸಿಸಬಾರದು. ಅವರ ಮನೆಯವರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳ ಬೇಕೆಂದು ನಾನು ಇನ್‌ಸ್ಟ್ರಕ್ಷನ್ಸ್ ಕೊಟ್ಟಿರುತ್ತೇನೆ.

ಅಡಿಕೆ ಕೃಷಿಯ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ,

ಅಡಿಕೆ ಕೃಷಿಗೆ ತಟ್ಟಿದೆ ಬಿಸಿ
ರೈತ ಕಾರ್ಮಿಕರಿಗೆ ಕಸಿವಿಸಿ
ಇದರ ನಿವಾರಣೆಗೆ
ಸರಕಾರದ್ದೇನು ಧೋರಣೆ.

ಅಸಮರ್ಪಕವಾದ, ಅಕಾಲ ಮಳೆ, ಹಬ್ಬುತ್ತಿರುವ ಕಳೆ, ಸತತ ಏರುತ್ತಿರುವ ರಾಸಾಯನಿಕ ಗೊಬ್ಬರಗಳ ಬೆಲೆ, ಕೂಲಿದರದ ವಿಪರೀತ ಹೆಚ್ಚಳ, ಪ್ರಕೃತಿ ವಿಕೋಪದಿಂದ ಇಳಿಮುಖವಾದ ಇಳುವರಿ, ಇವುಗಳಿಂದ ತತ್ತರಿಸುತ್ತಿದ್ದ ಅಡಿಕೆ ಬೆಳಿಗಾರರು ಈ ವರ್ಷವಂತೂ ಸಂಪಾರಿಯ ವಿಪರೀತ ಬೆಲೆ ಕುಸಿತದಿಂದ ಕಂಗಾಲಾಗಿ ಕಂಗೆಟ್ಟಿದ್ದಾರೆ. ೧೯೮೬ ರಲ್ಲಿ ಕಿಲೋ ಒಂದಕ್ಕೆ ೩೦ ರೂಪಾಯಿಯಂತೆ ಮಾರಾಟವಾಗುತ್ತಿದ್ದ ಅಡಿಕೆಗೆ ಇಂದು ಮಂಗಳೂರು ಮಾರುಕಟ್ಟೆಯಲ್ಲಿ ಕಿಲೋಗೆ ಬರೇ ೧೫–೧೬ ರೂಪಾಯಿಗಳು ಮಾತ್ರ. ಬ್ಯೂರೋ ಆಫ್ ಎಕನಾಮಿಕ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್, ಕೇಂದ್ರ ತೋಟಗಾರಿಕಾ ಸಂಶೋಧನಾ ಸಂಸ್ಥೆಯವರ ಅಂಕಿ ಸಂಖ್ಯೆಗಳ ಪ್ರಕಾರ ಕರ್ನಾಟಕದಲ್ಲಿ ಅಡಿಕೆ ಇಳುವರಿ ಎಕರೆಗೆ ೭೦೦ ಕಿಲೋ. ಸುಧಾರಿತ ವ್ಯವಸಾಯ ವಿಧಾನದಿಂದ ಮಾತ್ರ ಈ ಇಳುವರಿ ಸಾಧ್ಯ. ಈ ವಿಧಾನಗಳ ಆಳವಡಿಕೆ, ಗೊಬ್ಬರ ಬೆಲೆ ಏರಿಕೆ, ತೂತುಬಾವಿ – ತುಂತುರು ನೀರಾವರಿ ಪೂರೈಕೆ, ಕಾರ್ಮಿಕರ ಕೂಲಿದರದ ವಿಪರೀತ ಹೆಚ್ಚಳ, ಇದರಿಂದ ಸಾಗುವಳಿ ವೆಚ್ಚ ಎಕರೆಗೆ ರೂ. ೧೧,೦೦೦ ತಲುಪುತ್ತಿದೆ. ಈಗಿನ ಬೆಲೆಯಲ್ಲಿ ಉತ್ಪತ್ತಿ ೧೧,೫೦೦ ರೂ. ಗಳಿಂದ ೧೧,೩೦೦ ರೂಪಾಯಿಗಳು ಮಾತ್ರ. ಚಿಕ್ಕ ಹಿಡುವಳಿದಾರರೇ ಹೆಚ್ಚಾಗಿರುವ ದಕ್ಷಿಣ ಕನ್ನಡ ಮತ್ತು ಮಲೆನಾಡು ಭಾಗದ ಇತರ ಜಿಲ್ಲೆಗಳಲ್ಲಿ ಅಡಿಕೆ ಕೃಷಿ ಇಂದು ದುರ್ಭರ ಶಾಪವಾಗಿದೆ. ಬೆಳೆಸುವುದು ಪಾಪವಾಗಿದೆ. ಬೆಳೆಗಾರರು ಬದುಕುವುದು ದುಸ್ತರ ತಾಪವಾಗಿದೆ. ಬೆಳೆಸುವುದು ಪಾಪವಾಗಿದೆ. ಎರಡು ಲಕ್ಷಕ್ಕೂ ಮಿಕ್ಕಿ ಇರುವ ಕರ್ನಾಟಕದ ಅಡಿಕೆ ತೋಟಗಳ ಕಾರ್ಮಿಕರಂ ಕೆಲಸವಿಲ್ಲದೆ ತೊಳಲಾಡುವಂತಾಗಿದೆ. ಕೃಷಿಕರಂ ಹಣವಿಲ್ಲದೆ ಕಂಗಾಲಾಗಿ ವಾರ್ಷಿಕ ನಿರ್ವಹಣೆ ಮತ್ತು ಅಭಿವೃದ್ಧಿಗೆ ಅಲಕ್ಷ್ಯ ತೋರುವಂತಾಗಿದೆ. ಹೀಗಾದಲ್ಲಿ ಎರಡೇ ವರಂಷಗಳಲ್ಲಿ ಕಾಣಬಹುದು. ಅಡಿಕೆ ತೋಟಗಳ ಬದಲಂ ಸ್ಮಶಾನದ ನೋಟಗಳನ್ನು. ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ ಮತ್ತು ಇನ್ನಿತರ ಸಂಘ ಸಂಸ್ಥೆಗಳು, ರೈತರ ಪ್ರತಿನಿಧಿಗಳು ಈ ವಿಚಾರವನ್ನು ಬರಹ ಮೂಲಕ, ಸಮ್ಮೇಳನದ ಮೂಲಕ ಸರಕಾರದ ಗಮನ ಸೆಳೆದಿದ್ದರೂ, ತ್ವರೆಯಿಂದ ಆಗಬೇಕಾದ ನೆರವಿನ ಕುರಿತು ಯಾವುದೇ ನಿರ್ಧಾರ ಇನ್ನೂ ಆಗದಿರುವುದು ದುರದೃಷ್ಟ. ಅಡಿಕೆ ಕೃಷಿಕರ 'ಕಾಮಧೇನು' ಆಗಿರುವ ಕ್ಯಾಂಪ್ಕೋ ಸಂಸ್ಥೆಗೆ ರಿಯಾಯಿತಿ ದರದಲ್ಲಿ ಆರ್ಥಿಕ ನೆರವು ನೀಡಬೇಕು. ಖಾಸಗಿ ವರ್ತಕರಲ್ಲಿ ಕೆಲವರ ಅನಾರೋಗ್ಯಕರ ಅವ್ಯವಹಾರ ತಡೆಗಟ್ಟಲು ಸಹಕಾರಿ ರಂಗದ ಮಾರಾಟಕ್ಕೆ ಎಲ್ಲ ತೆರಿಗೆಗಳ ವಿನಾಯಿತಿ ನೀಡಬೇಕು ಖಾಸಗಿ ವರ್ತಕರಿಗೂ ಯೋಗ್ಯ ಮಾರುಕಟ್ಟೆ ವ್ಯವಸ್ಥೆ ರೂಪಿಸಬೇಕು. ಮಾರುಕಟ್ಟೆ ಬೆಲೆ ಏರಿಳಿತ ನಿಧಿ ನಿರ್ಮಾಣವಾಗಬೇಕು, ಆದರ ಮೂಲಕ ನೆರವು ದೊರಕಬೇಕು. ಅಡಿಕೆ ಬೆಳೆಯ ವ್ಯಾಪಕ ವಿಸ್ತರಣೆಗೆ ಕಾನೂನು ಬದ್ಧ ತಡೆ ನೀಡ ಬೇಕು. ಅಡಿಕೆ ಸಂಶೋಧನೆಗೆ ಪ್ರತ್ಯೇಕ ಸಂಸ್ಥೆ ಸ್ಥಾಪಿಸಬೇಕು. ವಾರ್ಷಿಕ ಬೆಳೆ–ಬಳಕೆ ಅನುಲಕ್ಷಿಸಿ ಮಾರಾಟ ವ್ಯವಸ್ಥೆಗೆ ವೈಜ್ಞಾನಿಕ ರೂಪ ನೀಡಲು ಮಾರ್ಕೆಟಿಂಗ್ ಇಂಟಲಿಜೆನ್ಸ್, ಸರ್ವೀಸ್ ಸ್ಥಾಪಿಸ ಬೇಕು ರಿಯಾಯಿತಿ ದರದಲ್ಲಿ ಕೃತಕ ಗೊಬ್ಬರ, ಕ್ರಿಮಿನಾಶಕ, ತುಂತು ನೀರಾವರಿ ಸೌಲಭ್ಯಗಳ ಪೂರೈಕೆ ಆಗಬೇಕು. ಬೆಲೆ ಇಳಿತಕ್ಕೆ ತುತ್ತಾದ ರೈತರ ಅಲ್ಪಾವಧಿ ಬೆಳೆಸಾಲ, ಮಧ್ಯಮಾವಧಿ ಸಾಲ ವಾಗಿ ಪರಿಮಿತಿಗೊಳಿತವಾಗಬೇಕು. ಮಾರುಕಟ್ಟೆಯ ಸ್ಥಿತಿಗತಿಗಳ ಅಧ್ಯಯನಕ್ಕಾಗಿ ಸಾಕಷ್ಟು ರೈತ ಪ್ರತಿನಿಧಿಗಳನ್ನೊಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸಿ ಅಧ್ಯಯನ ಮಾಡಬೇಕು. ಈ ಬಗ್ಗೆ ಸರಕಾರವನ್ನು ಒತ್ತಾಯಿಸುತ್ತೇನೆ.

ಮೇಲೆ ಹೇಳಿದ ಸಮಸ್ಯೆಗಳ ನಿವಾರಣೆಗೆ
ತಿಳಿಯಂ ಬಯಸುತ್ತೇನೆ ಸರಕಾರದ ಧೋರಣೆ
ಕಾರಣ – ಅಡಿಕೆಯ ಕೃಷಿಗೆ ತಟ್ಟಿದೆ ಬಿಸಿ
ಇದರಿಂದಾಗಿ ರೈತಕಾರ್ಮಿಕರಿಗೆ ಕಸಿವಿಸಿ
ಅಡಿಕೆ ಬೆಳೆಗಾರರ ಶಾಪ, ತಟ್ಟಬಾರದು ತಪಂಗೆ – ಪಾಪ.

೧.೩೦ ಪಿ. ಎಂ.

† ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ ರೀತಿಯಲ್ಲಿ ನಾನಂ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಕಾರಣ ಅವರ ಪ್ರಶ್ನೆ ಅತ್ಯಂತ ಉನ್ನತ ಮಟ್ಟದ ಸಾಹಿತ್ಯ, ಸಂಸ್ಕೃತಿಯಿಂದ ಕೂಡಿತ್ತು. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಈ ಕೆಳಕಂಡ ಉತ್ತರ ವನ್ನು ಕೊಡಬಯಸುತ್ತೇನೆ.

ಮಾನ್ಯ ಸದಸ್ಯರು ರಾಜ್ಯದ ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ತಮ್ಮ ಸೂಚನೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅನೇಕ ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಏರುತ್ತಿರುವ ಉತ್ಪಾದನಾ ವೆಚ್ಚ ಮತ್ತು ಕುಸಿಯುತ್ತಿರುವ ಬೆಲೆಯಿಂದಾಗಿ ಅಡಿಕೆ ಬೆಳೆಗಾರರಿಗೆ ಆಗಿರುವ ತೊಂದರೆಯನ್ನು ಗಮನಿಸಿ ಸರ್ಕಾರ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಪರಿಹರಿಸಲು ಪರಿಹಾರೋಪಾಯಗಳನ್ನು ಹುಡುಕಲು ಪ್ರಯತ್ನಿಸುತ್ತಿದೆ.

ರಾಷ್ಟ್ರದ ಅಡಿಕೆ ಉತ್ಪಾದನೆಯಲ್ಲಿ ಕರ್ನಾಟಕ, ಕೇರಳ ಮತ್ತು ಅಸ್ಸಾಂ ರಾಜ್ಯಗಳದ್ದು ಹೆಚ್ಚಿನ ಪಾಲು. ಬೆಲೆ ಕುಸಿತದ ಬಗ್ಗೆ ಚರ್ಚೆ ಮಾಡಲು ಕಳೆದ ತಿಂಗಳು ಕಾಸರಗೋಡಿನಲ್ಲಿ ಕರ್ನಾಟಕ ಮತ್ತು ಕೇರಳ ಅಡಿಕೆ ಬೆಳೆಗಾರರ ಒಂದು ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಕೇರಳದ ವ್ಯವಸಾಯ ಮಂತ್ರಿಗಳ ಜೊತೆಯಲ್ಲಿ ನಾನು ಕೂಡಾ ಹಾಜರು ಇದ್ದೆ. ಧೀರ್ಘ ಚರ್ಚೆಯ ನಂತರ ಆ ಸಭೆಯಲ್ಲಿ ಬೆಳೆಗಾರರು ಸೂಚಿಸಿರುವ ಅನೇಕ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ನಿನ್ನೆ ಅಂದರೆ ದಿನಾಂಕ ೧೦-೯-೧೯೮೬ರಂದು ಕರ್ನಾಟಕ, ಕೇರಳ ಮತ್ತು ಅಸ್ಸಾಂ ರಾಜ್ಯಗಳ ಪ್ರತಿನಿಧಿಗಳನ್ನು ಆಹ್ವಾನಿಸಿ ಸಭೆಯೊಂದನ್ನು ನಡೆಸಲಾಯಿತು. ಈ ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳು ಪ್ರಮುಖವಾದ ಕೆಲವು ಸಲಹೆಗಳನ್ನು ನೀಡಿದ್ದಾರೆ.

೧) ಅಡಿಕೆ ಬೆಲೆಯ ಏರಿಳಿತವನ್ನು ತಡೆಗಟ್ಟಲು ಮತ್ತು ಬೆಲೆಯನ್ನು ಸ್ಥಿರಿಕರಿಸಲು ''ಬೆಲೆ ಸ್ಥಿರಿಕರಣ ನಿಧಿ'' (ಪ್ರೈಸ್ ಸ್ಟಬಲೈಸೇಷನ್ ಫಂಡ್) ಸ್ಥಾಪಿಸುವುದು.

೨) ರಾಷ್ಟ್ರದ ಎಲ್ಲಾ ಅಡಿಕೆ ಬೆಳೆಯುವ ರಾಜ್ಯಗಳಲ್ಲಿ ಏಕ ರೂಪ ತೆರಿಗೆ ವ್ಯವಸ್ಥೆಯನ್ನು ರೂಪಿಸುವುದು.

೩) ವಿದೇಶಗಳಿಗೆ ರಫ್ತು ಮಾಡುವ ಉತ್ಪಾದನೆಗೆ ಪ್ರೋತ್ಸಾಹ ಧನ ನೀಡುವುದು.

೪) ಉತ್ಪಾದನೆಗೆ ಬೇಡಿಕೆ ಹೆಚ್ಚಿಸಲು ಮಾರುಕಟ್ಟೆ ಅಂದೋಳನ ಏರ್ಪಡಿಸುವುದು.

೫) ತಾತ್ಕಾಲಿಕವಾಗಿ ಪರಿಹಾರ ಕೊಡುವ ದೃಷ್ಟಿಯಿಂದ ಅಡಿಕೆ ಮಾರಾಟದ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವುದು.

೬) ಅಡಿಕೆ ಮತ್ತು ಕೋಕೊ ಸಂಸ್ಕರಣ ಸಹಕಾರ ಸಂಘದಿಂದ ಅಡಿಕೆಗೆ ವ್ಯಾಪಕವಾಗಿ ರಿಯಾಯಿತಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲು ಸರ್ಕಾರದಿಂದ ಸಹಾಯ ಮಾಡುವುದು ಮತ್ತು ಕ್ಯಾಂಪ್ಕೋದಿಂದ ಕೋಕೋ ಮತ್ತು ಅಡಿಕೆ ವ್ಯಾಪಾರದ ಚಟುವಟಿಕೆಗಳನ್ನು ಬೇರೆ ಬೇರೆ ವಿಂಗಡಿಸಲು ಸಲಹೆ ಮಾಡುವುದು.

೭) ಹೆಚ್ಚುತ್ತಿರುವ ಉತ್ಪಾದನೆಯನ್ನು ಉಪಯೋಗಿಸಲು ಅಡಿಕೆಯಿಂದ ಬೇರೆ ಉಪ ಉತ್ಪನ್ನಗಳನ್ನು (ಬೈ ಪ್ರಾಡಕ್ಟ್ಸ್) ಮಾಡುವುದು ಸಾಧ್ಯವೇ ಎನ್ನುವುದರ ಬಗ್ಗೆ ಪರಿಶೀಲಿಸುವುದು ಮತ್ತು ಇತರ ಸಲಹೆಗಳು ಬಂದಿವೆ.

ಈ ಎಲ್ಲಾ ಸಮಸ್ಯೆಗಳನ್ನು ಧೀರ್ಘವಾಗಿ ಅಧ್ಯಯನ ಮಾಡಲು ಇರುವ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಳ್ಳಬೇಕಾಗುವ ಪರಿಹಾರ ಕ್ರಮಗಳನ್ನು ಸೂಚಿಸಲು ಕರ್ನಾಟಕ, ಕೇರಳ ರಾಜ್ಯಗಳ ಬೆಳೆಗಾರರು, ವರ್ತಕರು ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸುವುದು. ಈ ತೀರ್ಮಾನಕ್ಕೆ ಕೇರಳ ರಾಜ್ಯದ ವ್ಯವಸಾಯ ಮಂತ್ರಿಗಳ ಒಪ್ಪಿಗೆ ದೊರೆತಿದೆ.

ಮಾನ್ಯ ಸದಸ್ಯರ ಅಭಿಪ್ರಾಯದಂತೆ ಅಡಿಕೆ ಬೆಳೆಗಾರರಿಗೆ ಸೂಕ್ತ ಪರಿಹಾರ ಒದಗಿಸಬೇಕೆಂಬುದು ನನ್ನ ಇಚ್ಛೆಯು ಆಗಿದೆ. ಆದರೆ ವ್ಯವಸಾಯ ಉತ್ಪನ್ನಗಳ ಜಿಲ್ಲೆಯ ಏರಿಳಿತ ಅಡಿಕೆ ಬೆಲೆಗೆ ಮಾತ್ರ ಸೀಮಿತವಾಗಿಲ್ಲ. ವ್ಯವಸಾಯ ಉತ್ಪನ್ನ ಬೆಲೆಯ ಏರಿಳಿತ ತಪ್ಪಿಸಲು ಶಾಶ್ವತ ಪರಿಹಾರ ಏನೆಂದರೆ ಉತ್ಪಾದನೆಗೆ ಕನಿಷ್ಟ ಬೆಲೆಯನ್ನು ರಾಷ್ಟ್ರದಲ್ಲಿ ನಿಗದಿ ಮಾಡುವುದು. ಆಗ ಮಾತ್ರ ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯುತ್ತದೆ.

ಏಕ ಕಾಲದಲ್ಲಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ ಆಗದಿದ್ದರೂ ಮಾನ್ಯ ಸದಸ್ಯರ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಈಗ ರಚಿಸುತ್ತಿರುವ ಸಮಿತಿಯ ವರದಿಯನ್ನು ಪರಿಶೀಲಿಸಿ ಬೆಳೆಗಾರರಿಗೆ ಸೂಕ್ತವಾದ ಪರಿಹಾರ ಒದಗಿಸಲು ಸರ್ಕಾರ ಪ್ರಯತ್ನ ಮಾಡುತ್ತದೆ.